ನಾಡು ನುಡಿಗೆ ಆತ್ಮೀಯ ವಿದ್ವತ್ತಿಗೆ ಪರ್ಯಾಯ

ರಂಗನಾಥ ಶರ್ಮಾ ಬಹುಮುಖ ಸಾಧನೆ

ಹಿರಿಯ ಸಂಸ್ಕೃತ ವಿದ್ವಾಂಸ ಎನ್. ರಂಗನಾಥ ಶರ್ಮಾ ಅವರ ಕೃತಿ 'ಕಾವ್ಯೋದ್ಯಾನಮ್' ಲೋಕಾರ್ಪಣೆಯಾಗುತ್ತಿರುವ ಹಿನ್ನೆಲೆಯಲ್ಲಿ ಅವರ ವ್ಯಕ್ತಿತ್ವದ ಬಹುಮುಖಿ ಸಾಧನೆಯ ಪರಿಚಯವನ್ನು ಇಲ್ಲಿ ನೀಡಲಾಗಿದೆ.

ಸಂಸ್ಕೃತದಲ್ಲಿ ವ್ಯಕ್ತಿಯ ಗೆಮ್ಮೆ ಬಲ್ಮೆಗಳನ್ನು ಬಂಧುರವಾಗಿ ಎತ್ತಿ ತೋರುವ ಪದಬಿಂದುಗಳು ಹಲವಾರಿವೆ. ವಿದ್ಯಾಧನ, ತಪೋಧನ, ಯಶೋಧನ, ಮಾನಧನ ಮುಂತಾಗಿ. ವಿದ್ಯಾಧನರೆಂದರೆ ವಿದ್ಯೆಯನ್ನೇ ಎಲ್ಲಕ್ಕಿಂತ ಹೆಚ್ಚಿನ ಸಂಪತ್ತೆಂದು ತಿಳಿದು ಬಾಳುವವರು. ಯಾರ ಜೀವನದಲ್ಲಿ ತಪಸ್ಸೇ ಅತ್ಯಂತ ಪ್ರಮುಖಸ್ಥಾನ ಪಡೆಯುತ್ತದೋ ಅವರು ತಪೋಧನರು.

ವಿದ್ಯಾಧನ ಎಂಬ ಶಬ್ದ ಕಿವಿಗೆ ಬಿದ್ದೊಡನೆ ಸಂಸ್ಕೃತ-ಕನ್ನಡ ವಿದ್ವತ್ ಲೋಕದ ಪರಿಚಯವಿರುವ ಬಹುಜನರಿಗೆ ಹೊಳೆಯುವ 'ಮೂರ್ತ ಅರ್ಥ' ವಿದ್ವಾನ್ ಎನ್. ರಂಗನಾಥಶರ್ಮರು. ಇವರು ಅಗ್ರಮಾನ್ಯ ಸಂಸ್ಕೃತ-ಕನ್ನಡ ಪಂಡಿತರು. ಸಂಸ್ಕೃತ-ಕನ್ನಡ ಸಾರಸ್ವತ ಭಂಡಾರಕ್ಕೆ ಇವರ ಕೊಡುಗೆ ಅಪಾರ. ಅನುವಾದ, ಗ್ರಂಥಸಂಪಾದನೆ, ಸಂಶೋಧನೆ, ವ್ಯಾಖ್ಯಾನ, ಜೀವನ ಚರಿತ್ರೆ, ವಿಮರ್ಶೆ, ಕಾವ್ಯ ಎಂದು ಅನೇಕ ಬಗೆಯಾಗಿ ನಾನಾ ಕವಲುಗಳಲ್ಲಿ ವಿಸ್ತರಿಸಿಕೊಂಡಿರುವ ಶರ್ಮರ ಸಾಹಿತ್ಯ 20,000 ಪುಟಗಳನ್ನು ಮೀರಿದೆ ಎಂದರೆ ಇವರ ಬರವಣಿಗೆಯ ನಿರಂತರತೆಯ ಅರಿವಾಗುತ್ತದೆ. 'ಡಿ.ವಿ.ಜಿ, ವಿ.ಸಿ., ಸೇಡಿಯಾಪು ಕೃಷ್ಣಭಟ್ಟ, ಡಾ.ಕೆ. ಕೃಷ್ಣಮೂರ್ತಿ ಮುಂತಾದ ನಮ್ಮ ನಾಡಿನ ನುಡಿಯೋಜರ ಆತ್ಮೀಯರಾಗಿ 20ನೆಯ ಶತಾಬ್ದಿಯ ವಿದ್ವತ್ತೆಗೊಂದು ಒರೆಗಲ್ಲೆಂಬ ಸಾರ್ಥಕ ಸ್ಥಾನವನ್ನು ಗಳಿಸಿದವರು ಶರ್ಮರು' ಎಂದು ಶತಾವಧಾನಿ ಗಣೇಶ್ ಅವರು ಇವರನ್ನು ಕುರಿತು ಬರೆದ ವಾಣೀವಾಹನ ಪುಸ್ತಕದಲ್ಲಿ ಶರ್ಮರ ಮಟ್ಟವನ್ನು ಗುರುತಿಸಿದ್ದಾರೆ.

ದೇಹ ಮಾಗಿದ್ದರೂ, ಕಣ್ಣುಮಂಜಾದರೂ, ಕಿವಿ ಮಂದವಾದರೂ ಮೆದುಳು ಮಾತ್ರ ಸುಸ್ಥಿತಿಯಲ್ಲಿದೆ. ನೇಮ-ನಿಷ್ಠೆಯಿಂದ ಒಪ್ಪವಾದ ಸರಳಜೀವನ ಕ್ರಮವನ್ನು ಒಗ್ಗಿಸಿಕೊಂಡವರಲ್ಲೆಲ್ಲ ಕಾಣಬಹುದಾದ ಒಂದು ಸೊಗಸಿದು. ಮತಿಯ ಮನೆಯಾದ ಮಸ್ತಿಷ್ಕಕ್ಕೆ ಅಪಾಯ ಒದಗುವುದು ಅಪರೂಪ. 93ರ ಹೊಸ್ತಿಲಲ್ಲಿ ಇದ್ದರೂ ತಮ್ಮನ್ನು ಅರಸಿ ಬಂದ ವಿದ್ಯಾರ್ಥಿಗಳಿಗೆ ಶರ್ಮರು ಪಾಠ ಹೇಳುತ್ತಾರೆ. ಶಾಸ್ತ್ರಚರ್ಚೆಗಿಳಿಯುತ್ತಾರೆ. ಬರೆಯುತ್ತಾರೆ. 20ನೇ ಶತಮಾನದ ಮೊದಲ ಪಾದದಲ್ಲಿ(1916) ಜನಿಸಿದ ಶರ್ಮರು ಬಡತನದ ಬವಣೆಯಲ್ಲೇ ಶಿಕ್ಷಣ ಮುಗಿಸಿದವರು.ಶರ್ಮರಿಗೆ ಬುದ್ಧಿದಾರಿದ್ರ್ಯ ಇರಲಿಲ್ಲ. ವಿದ್ಯಾರ್ಥಿಗಳಿಗೆ ಇರಲೇಬೇಕಾದಂತಹ ಆಸಕ್ತಿ, ಉತ್ಸಾಹ ಯಥೇಚ್ಛವಾಗಿತ್ತು.

ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿಗೆ ಸೇರಿದ ಒಂದು ಪುಟ್ಟ ಗ್ರಾಮ ನಡಹಳ್ಳಿ ರಂಗನಾಥ ಶರ್ಮರ ಹುಟ್ಟೂರು. ಶರ್ಮರ ತಂದೆ ಶ್ರೀ ತಿಮ್ಮಪ್ಪನವರು ನಡಹಳ್ಳಿಯ ಬಡಬೇಸಾಯಗಾರರಾದರೂ ಹಷ್ಯಕರ ಮನೆಗಳಲ್ಲಿರುವ ವೈದಿಕ ಆಚಾರ-ವಿಚಾರ ಸುಸಂಸ್ಕೃತಿಗಳ ಸಾರವನ್ನು ಉಳಿಸಿಕೊಂಡಿದ್ದರು. ತಿಮ್ಮಪ್ಪ-ಜಾನಕಮ್ಮ ದಂಪತಿಗಳಿಗೆ ನಾಲ್ಕನೆಯ ಮಗನಾಗಿ ಹುಟ್ಟಿದರು.

ಕೆಳದಿಯ ರಾಮೇಶ್ವರ ದೇವಾಲಯದ ಆಶ್ರಯದಲ್ಲಿದ್ದ ಸಂಸ್ಕೃತಪಾಠಶಾಲೆಯ ಉಪಾಧ್ಯಾಯರಾದ ನಾರಾಯಣಶಾಸ್ತ್ರಿಗಳು ರಂಗನಾಥಶರ್ಮರ ಮೊದಲ ಗುರುಗಳು. ಬೇಸಿಗೆ ರಜೆಯಲ್ಲಿ ಪತ್ರಬರೆದು ಗುರುಗಳನ್ನು ಸಂಪರ್ಕಿಸಲು ಕಾತರಪಡುತ್ತಿದ್ದರು. ಆದರೆ ಓದುವ ಕಾಲದಲ್ಲಿ ಶರ್ಮರು ಕಾಸನ್ನೇ ಕಂಡವರಲ್ಲ. ಪೋಸ್ಟ್‌ಕಾರ್ಡ್ ಕೊಳ್ಳಲು ಕೂಡ ಒಂದು ಕಾಸೂ ಇರುತ್ತಿರಲಿಲ್ಲ. ಗೆಳೆಯನಿಂದ ಒಮ್ಮೆ ಹೇಗೋ ಒಂದು ಆಣೆ ಸಂಪಾದನೆ ಮಾಡಿ ಶ್ಲೋಕಮಯವಾದ ಪತ್ರವೊಂದನ್ನು ತಮ್ಮ ಗುರುಗಳಿಗೆ ಬರೆದಿದ್ದರು.

ಪತ್ರ ಮೂಲ್ಯಮಪಿ ದಾತುಮಕ್ಷಮಃ
ಪತ್ರಮೇಕಮಪಿ ನಾಲಿಖಂ ಗುರೋ
ಮಿತ್ರದತ್ತಮಿದಂ ಆಣಕಂ ತತಃ
ಪತ್ರಮೇಕಮಧುನಾ ವಿಲಿಖ್ಯತೇ

"ಕಾಗದಕೊಳ್ಳಲು ಕಾಸಿಲ್ಲದ ನಾನು ಇದುವರೆವಿಗೂ ಪತ್ರವನ್ನೇ ಬರೆಯಲಾಗಲಿಲ್ಲ. ಗುರುವೇ ಕ್ಷಮಿಸಿ. ಇದೀಗ ಗೆಳೆಯನಿಂದ ಪಡೆದ ಒಂದಾಣೆಯಿಂದ ಪತ್ರಕೊಂಡು ಬರೆಯುತ್ತಿದ್ದೇನೆ." ಇದು ಶರ್ಮರ ಮೊದಲ ಪದ್ಯ. ಪ್ರಾಥಮಿಕ ಶಾಲೆಯಲ್ಲಿರುವಾಗಲೇ ಪದ್ಯಮಾಡುವ ಗೀಳು ಹತ್ತಿಕೊಂಡಿತು ಎನ್ನುತ್ತಾರೆ ಶರ್ಮರು. ಸಂಸ್ಕೃತದ ಅನೇಕ ಮಹತ್ತರ ಶಾಸ್ತ್ರಕಾವ್ಯಗಳನ್ನು ಸಮರ್ಥವಾಗಿ ಕನ್ನಡಕ್ಕೆ ತಂದ ಕೀರ್ತಿ ರಂಗನಾಥಶರ್ಮರಿಗೆ ಸಲ್ಲುತ್ತದೆ. ವಾಲ್ಮೀಕಿ ರಾಮಾಯಣದ, ವಿಷ್ಣುಪುರಾಣದ, ಭಾಗವತದ ಉತ್ತಮ ಅನುವಾದಗಳನ್ನು ಕನ್ನಡಕ್ಕೆ ಅಧಿಕಾರಯುತವಾದ ರೀತಿಯಲ್ಲಿ ತಂದವರು ಶರ್ಮರು. ಇವರು ಗದ್ಯ-ಪದ್ಯಗಳೆರಡಲ್ಲೂ ನಿಪುಣರು. ಅರ್ಥಪೂರ್ಣವೂ, ವಿಶದವೂ, ವಿಷಯಪ್ರತಿಪಾದನೆಯಲ್ಲಿ ಸಮರ್ಥವೂ ಆದ ಕನ್ನಡ ಬರವಣಿಗೆಯನ್ನು ಶರ್ಮರು ಕೈಗೂಡಿಸಿಕೊಂಡಿದ್ದಾರೆ. ಹಾಗೆಯೇ ಸುಂದರ ಛಂದೋಬಂಧಗಳಿಂದ ಕಿವಿಗಿಂಪೆನಿಸುವ ಲಯಬದ್ಧಕಾವ್ಯವನ್ನು ಅವರ ಲೇಖನಿ ಹೊಮ್ಮಿಸಿದೆ. ಇದಕ್ಕೆ ಕಾರಣ ಅವರೇ ಹೇಳುವಂತೆ ಅವರ ಹುಟ್ಟೂರಿನಲ್ಲಿ ನಿರಂತರವಾಗಿ ನಡೆಯುತ್ತಿದ್ದ ಯಕ್ಷಗಾನ ಪ್ರಸಂಗಗಳು. ಚಿಕ್ಕಂದಿನಲ್ಲಿ ನಿತ್ಯವೂ ಲಯಬದ್ಧವಾದ ಕನ್ನಡಪದ್ಯಗಳು ಕಿವಿಗೆ ಬಿದ್ದು ಛಂದಸ್ಸಿನ ಅರಿವು ಸಹಜವಾಗಿಯೇ ಉಂಟಾಯಿತು. ಮುಂದೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಹಳಗನ್ನಡ ಪಂಡಿತರಾಗಿ ಕೆಲಸ ನಿರ್ವಹಿಸುವಾಗ ಈ ಬಾಲ್ಯಸಂಸ್ಕಾರ ಬಹಳ ಪ್ರಯೋಜನಕ್ಕೆ ಬಂದಿತಂತೆ.

ಶರ್ಮರು ಪ್ರೌಢಸಂಸ್ಕೃತ ಶಿಕ್ಷಣವನ್ನು ಪಡೆದದ್ದು ಬೆಂಗಳೂರಿನ ಟಿಪ್ಪುಸುಲ್ತಾನನ ಬೇಸಗೆ ಅರಮನೆಯಲ್ಲಿ ನಡೆಯುತ್ತಿದ್ದ ಸಂಸ್ಕೃತ ಮಹಾಪಾಠಶಾಲೆಯಲ್ಲಿ. ಹೆಸರಾಂತ ವೈಯಾಕರಣಿಗಳಾದ ತಿಮ್ಮಣ್ಣಾಚಾರ್ಯ ಹಾಗೂ ನುಗ್ಗೆಹಳ್ಳಿ ತಿರುನಾರಾಯಣ ಅಯ್ಯಂಗಾರ್ಯರು ವ್ಯಾಕರಣಶಾಸ್ತ್ರ ಪಾಠಮಾಡಿದ ಗುರುಗಳು. ಶರ್ಮರು ವ್ಯಾಕರಣ, ಅಲಂಕಾರಶಾಸ್ತ್ರಗಳಲ್ಲಿ ವಿದ್ವತ್ ಪದವಿಗಳನ್ನು ಪಡೆದು, ಅದ್ವೈತದರ್ಶನದ ಸಿದ್ಧಿಗ್ರಂಥಗಳೆನಿಸಿದ ನೈಷ್ಕರ್ಮ್ಯಸಿದ್ಧಿ, ಅದ್ವೈತಸಿದ್ಧಿ ಮುಂತಾದವನ್ನು ಅಧ್ಯಯನ ಮಾಡಿ ಶಾಂಕರದರ್ಶನದಲ್ಲೂ ಪ್ರೌಢಪಂಡಿತರಾದರು. ಇದೇ ರೀತಿ ಕನ್ನಡ ಪಂಡಿತ ಪರೀಕ್ಷೆಯನ್ನು ಶರ್ಮರು ಸ್ವಂತಬಲದಿಂದಲೇ ಗೆದ್ದುಕೊಂಡರು. ಡಿ.ವಿ ಗುಂಡಪ್ಪ ಮತ್ತು ಶರ್ಮರಿಗೆ ಬೆಳೆದ ಆತ್ಮೀಯತೆ, ವಿದ್ಯಾಸಂಬಂಧ ವಾಲ್ಮೀಕಿ ರಾಮಾಯಣದ ಪರಿಪೂರ್ಣ ಕನ್ನಡಾನುವಾದಕ್ಕೆ ಮೂಲ ಹೇತುವಾಯಿತು. ಗುಂಡಪ್ಪನವರು ಇವರ ಅನುವಾದ ಸಂಪುಟಗಳಿಗೆ ಮುನ್ನುಡಿಯ ಕಲಶವಿಟ್ಟು ವಾಲ್ಮೀಕಿಯ ಹೃದಯವನ್ನು ಅರ್ಥಮಾಡಿಕೊಳ್ಳಲು ಕನ್ನಡಿಗರಿಗೆ ನೆರವು ನೀಡಿದ್ದಾರೆ.

ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ಅಧ್ಯಾಪನ, ಗ್ರಂಥಾಲಯ ಕಾರ್ಯಗಳಲ್ಲಿ ತೊಡಗಿದ್ದ ಸಂದರ್ಭದಲ್ಲಿ ಪ್ರಾಯಶಃ ಡಿ.ವಿ.ಜಿಯವರ ಮೂಲಕವೇ ಕನ್ನಡದ ಕಟ್ಟಾಳು ಜಿ. ನಾರಾಯಣರ ಪರಿಚಯವಾಯಿತು. ಕನ್ನಡಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ನಾರಾಯಣರು ಪರಿಷತ್ತಿನ ವಜ್ರಮಹೋತ್ಸವ ನಿಮಿತ್ತವಾಗಿ ಅನೇಕ ಹಳಗನ್ನಡ ನಡುಗನ್ನಡ ಕಾವ್ಯಗಳನ್ನು ಹೊಸಗನ್ನಡ ಗದ್ಯಾನುವಾದದೊಡನೆ ಪ್ರಕಟಿಸುವ ಯೋಜನೆ ಹಾಕಿಕೊಂಡರು. ಅದರಲ್ಲಿ ಶ್ರೀ ಶರ್ಮರು ಪ್ರಧಾನ ಸಂಪಾದಕರಾಗಿ ಪಾಲ್ಗೊಂಡು ಪ್ರಾಚೀನ ಪ್ರೌಢ ಕನ್ನಡ ಕಾವ್ಯಗಳಿಗೆ ತಿಳಿಗನ್ನಡದ ನೂತನಾವತಾರವನ್ನು ಹೊಂದಿಸಿದರು. ತುಂಬ ಕಠಿಣವಾದ, ವಿದ್ವತ್ತನ್ನು ಒರೆಗೆ ಹಚ್ಚುವಂತಹ ಈ ಕೆಲಸವನ್ನು ಶರ್ಮರು ಅಚ್ಚುಕಟ್ಟಾಗಿ ಮಾಡಿ ಕನ್ನಡತಾಯಿಯ ಸೇವೆಗೈದು ಧನ್ಯರಾಗಿದ್ದಾರೆ. ಕನ್ನಡ ಪ್ರಾಚೀನ ಕಾವ್ಯಗಳಲ್ಲಿ ಸಂಸ್ಕೃತದ ಪ್ರಭಾವ ಬಲು ಹೆಚ್ಚಾದ್ದರಿಂದ ಸಂಸ್ಕೃತ ವಿದ್ವಾಂಸರಿಗೆ ಈ ಕೆಲಸ ಸ್ವಲ್ಪಮಟ್ಟಿಗೆ ಸುಲಭಸಾಧ್ಯ.

ಇಂದಿಗೂ ಇವರ ಕನ್ನಡ ಸೇವೆ ನಿರಂತರವಾಗಿ ಸಾಗಿದೆ. ರಾಷ್ಟ್ರೋತ್ಥಾನದ ಭಾರತ-ಭಾರತೀ ಪುಸ್ತಕಸಂಪದ, ಐ.ಬಿ.ಎಚ್. ಪ್ರಕಾಶನ ಸಂಸ್ಥೆಯ 'ಕನ್ನಡನಾಡು ಮತ್ತು ಕನ್ನಡ ಕಾವ್ಯಪರಂಪರೆ' ಪುಸ್ತಕ ಮಾಲಿಕೆಗಾಗಿ ಶ್ರಮಿಸಿದ್ದಾರೆ. ಶರ್ಮರ ಕನ್ನಡ ಕೃತಿಗಳಲ್ಲಿ ಲೌಕಿಕ ನ್ಯಾಯಗಳು, ವ್ಯಾಸರಹಸ್ಯ, ವಾಲ್ಮೀಕಿ ರಾಮಾಯಣದ ನಾಲ್ಕು ಪಾತ್ರಗಳು, ಆಸ್ತಿಕ ಪರ್ವ, ಮಾನವಧರ್ಮ ಶಾಸ್ತ್ರ ಮತ್ತು ಮಹಿಳೆಯರು, ಸೂಕ್ತಿ-ವ್ಯಾಪ್ತಿ-ಮುಂತಾದುವೆಲ್ಲ ಸಂಸ್ಕೃತದಲ್ಲಿನ ಶಾಸ್ತ್ರ-ಕಾವ್ಯಗಳ ಸಾಗರದಿಂದೆತ್ತಿ ಕನ್ನಡದ ಮಡಿಲಿಗೆ ತುಂಬಿದ ವಿಚಾರ ರಸಪೂರಿತವಾದ ಗ್ರಂಥಗಳು. ಹೊಸಗನ್ನಡ ವ್ಯಾಕರಣ, ವ್ಯಾಕರಣಶಾಸ್ತ್ರದ ಪರಿವಾರ ಈ ಎರಡೂ ಗ್ರಂಥಗಳು ಕನ್ನಡ ಭಾಷೆಯ ವ್ಯಾಕರಣಾಂಶಗಳನ್ನು ಕುರಿತ ಶ್ರೇಷ್ಠಗ್ರಂಥಗಳು. ಕನ್ನಡ-ಸಂಸ್ಕೃತ ವ್ಯಾಕರಣಶಾಸ್ತ್ರಗಳಲ್ಲಿ ಆಳವಾದ ಅರಿವಿರುವ ಲೇಖಕರ ಕೃತಿಗಳಾದ್ದರಿಂದ ಭಾಷಾಭ್ಯಾಸಿಗಳಾದ ಕನ್ನಡಿಗರಿಗೆ ಬಹೂಪಯುಕ್ತವಾಗಿದೆ. ಇಂದು ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರೆತ (ಸರಕಾರದ ವತಿಯಿಂದ!) ಕಾರಣಕ್ಕಾದರೂ ಅಪಶಬ್ದಗಳ ಬಗೆಗೆ ಎಚ್ಚರವಹಿಸಬೇಕಾದ ಅನಿವಾರ್ಯತೆ ಒದಗಿದೆ. ಸಾಧುರೂಪಗಳನ್ನು ಗುರುತಿಸಬೇಕಾಗಿದೆ. ಈ ನಿಟ್ಟಿನಲ್ಲಿ ರಂಗನಾಥಶರ್ಮರ ಎರಡೂಗ್ರಂಥಗಳ ಅಧ್ಯಯನ ಕನ್ನಡಿಗರಿಗೆ ಅವಶ್ಯಕವಾಗಿದೆ. ಹಾಗೆಯೇ ವ್ಯಾಕರಣಶಾಸ್ತ್ರದ ಆಳ-ಅಗಲಗಳನ್ನು ಹಾಗೂ ಅದರ ವಿಶ್ವವ್ಯಾಪಿ ತತ್ತ್ವಗಳನ್ನು ತಿಳಿಯಲು ಭರ್ತೃಹರಿಯ ಉದ್ಗ್ರಂಥವಾದ 'ವಾಕ್ಯಪದೀಯ'ಕ್ಕೆ ಶರ್ಮರು ನೀಡಿರುವ ಕನ್ನಡ ವ್ಯಾಖ್ಯಾನಗಳನ್ನು ಗಮನಿಸಬೇಕು.

ಶ್ರವಣಬೆಳಗೊಳದ ಮಹಾಮಸ್ತಕಾಭಿಷೇಕವು ಜಗದ್ವಿಖ್ಯಾತವಾಗಿದೆಯಷ್ಟೇ. ಆದರೆ ಸಂಸ್ಕೃತದಲ್ಲಿ ಬಾಹುಬಲಿಯನ್ನು ಕುರಿತ ನಾಟಕವಾಗಲಿ, ಸುಪ್ರಭಾತಸ್ತೋತ್ರವಾಗಲಿ ಇಲ್ಲದಿರುವುದನ್ನು ಗಮನಿಸಿ ಚಾರುಕೀರ್ತಿಭಟ್ಟಾರಕ ಸ್ವಾಮಿಗಳು ಈ ಕೊರತೆಯನ್ನು ತುಂಬಿಸಿ ಕೊಡಲು ಶರ್ಮರನ್ನು ನಿಯೋಜನೆ ಮಾಡಿದರಂತೆ. ಅವರ ಆಣತಿಯಂತೆ ಸರಸಕವಿತಾಪಟುಗಳಾದ ಶರ್ಮರು ಸಂಸ್ಕೃತದಲ್ಲಿ ಬಾಹುಬಲಿವಿಜಯಂ ಎಂಬ ನಾಟಕವನ್ನು, ಗೊಮ್ಮಟೇಶ್ವರ ಸುಪ್ರಭಾತವನ್ನೂ ಅತ್ಯಂತ ಸೊಗಸಾದ ರೀತಿಯಲ್ಲಿ ಬರೆದು ಗೊಮ್ಮಟೇಶ್ವರನಿಗೆ ಸಮರ್ಪಿಸಿದರು. ಇವುಗಳನ್ನು ಮೊದಲಬಾರಿಗೆ ಬರೆದ ಕೀರ್ತಿರಿಗೆ ಶರ್ಮರಿಗೆ ಸಲ್ಲುತ್ತದೆ. ನಿತ್ಯಕರ್ಮಾನುಷ್ಠಾನಪರರಾದ ನಮ್ಮ ವಿದ್ವಾಂಸರು ಕರ್ನಾಟಕದ ಹೊರಗೆ ಹೋಗಿ ತಮ್ಮ ವೈದುಷ್ಯವನ್ನು ಪ್ರಕಟಿಸಿದವರಲ್ಲ. ಗ್ರಂಥರಚನೆಗಳ, ಮೂಲಕ ಅಧ್ಯಯನ-ಅಧ್ಯಾಪನ, ಉಪನ್ಯಾಸಗಳ ಮೂಲಕವೇ ಪ್ರಕಾಶಕ್ಕೆ ಬಂದವರು. ಮಾನ್ಯ ಶರ್ಮರ ಸುದೀರ್ಘ ಸೇವೆಯನ್ನು ಕೃತಜ್ಞತೆಯಿಂದ ನೆನೆದು ಅವರ ಅಭಿಮಾನಿಗಳು, ಶಿಷ್ಯರು, ವಿದ್ಯಾಬಂಧುಗಳು ರಂಗಾಭಿನಂದನಂ ಎಂಬ ಸಂಸ್ಕೃತ ಗ್ರಂಥವನ್ನೂ, ರಂಗಾಭಿನಂದನ ಎಂಬ ಕನ್ನಡ ಸಂಭಾವನ ಗ್ರಂಥವನ್ನೂ ಅವರಿಗೆ ಅರ್ಪಿಸಿದ್ದಾರೆ.

ಅವರ ಸಾಧನೆ ಸಿದ್ಧಿಗಳನ್ನು ಗೌರವಿಸಿ, ವರಿಸಿ ಬಂದ ಮನ್ನಣೆಗಳು ಅನೇಕ. ಅವುಗಳಲ್ಲಿ ಕೆಲವು ಹೀಗಿವೆ. ರಾಜ್ಯದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ, ರಾಷ್ಟ್ರದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ, ಕರ್ನಾಟಕ ಸಂಸ್ಕೃತಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಕೇಂದ್ರ ಸರ್ಕಾರದ ರಾಷ್ಟ್ರಪತಿ ಸನ್ಮಾನ, ಸೇಡಿಯಾಪು ಪ್ರಶಸ್ತಿ, ಪರಮದೇವ ಪ್ರಶಸ್ತಿ, ತಿರುಪತಿಯ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಮಹಾಮಹೋಪಾಧ್ಯಾಯ ಪದವಿ, ಧರ್ಭಾಂಗ ಸಂಸ್ಕೃತ ವಿಶ್ವವಿದ್ಯಾಲಯದ ಗೌರವ ಡೀಲಿಟ್ ಪದವಿಯಾದ ವಿದ್ಯಾವಾರಿಧಿ, ಡಿ.ವಿ.ಜಿ. ಸ್ಮಾರಕ ಸನ್ಮಾನ ಇತ್ಯಾದಿ.

ನಾಡುನುಡಿಯ ಸೇವೆಯಲ್ಲೇ ದೀರ್ಘಾಯುಷ್ಯವನ್ನು ಕಳೆದ ಕರ್ಮಯೋಗಿ ರಂಗನಾಥಶರ್ಮರ ಸಂಸ್ಕೃತಕಾವ್ಯ ಸಂಕಲನವಾದ 'ಕಾವ್ಯೋದ್ಯಾನಂ' ಇಂದು ಲೋಕಾರ್ಪಣೆಗೊಳ್ಳುತ್ತಿದೆ. ಇದು ಬಿಡಿ ಪದ್ಯಗಳ, ನಾಟಕಗಳ, ಲಘುಕಾವ್ಯಗಳ ಸಂಗ್ರಹ. ವಿದ್ಯಾನಿಧಿಗಳಾದ ರಂಗನಾಥಶರ್ಮರು ಶತಾಯುಗಳಾಗಿದ್ದು ಸಂಸ್ಕೃತ ಕನ್ನಡ ಪ್ರಪಂಚದ ಚಿರನಿಧಿಯಾಗಿರಲಿ ಎಂಬುದೇ ಎಲ್ಲರ ಹಾರೈಕೆ.

- ಪ್ರೊ.ಎಸ್.ಆರ್.ಲೀಲಾ, ವಿಧಾನಪರಿಷತ್ ಸದಸ್ಯರು, ಬೆಂಗಳೂರು